KANNADA

ಬುಂಬೂ...

ಕದಲದೆ ಇದ್ದ ಕತ್ತೆ

ಕತೆಃ ಸುಜಾತಾ ಪದ್ಮನಾಭನ

ಚಿತ್ರಃ ಮಧುವಂತಿ ಅನಂತರಾಜನ

ಏಕಲವ್ಯ ಪ್ರಕಾಶನ

ಬುಂಬೂ...

ಕದಲದೆ ಇದ್ದ ಕತ್ತೆ

ಕತೆಃ ಸುಜಾತಾ ಪದ್ಮನಾಭನ

ಚಿತ್ರಃ ಮಧುವಂತಿ ಅನಂತರಾಜನ

ಏಕಲವ್ಯ ಪ್ರಕಾಶನ

ಲಡಾಖದ ಪರ್ವತಾವಳಿಯಲ್ಲಿ ಹುಟ್ಟಿ ಬೆಳೆದ ಇನ್ನುಳಿದ ಕತ್ತೆಗಳಂತೆ ಬುಂಬೂ ಕತ್ತೆ ಕೂಡ ಇತ್ತು. ನೋಡಲು ಅಂದ-ಚೆಂದದ, ಮುದ್ದಾದ, ಆಟವಾಡುವ ಈ ಕತ್ತೆ ಪದ್ಮಾಳ ಮನೆಯವರಿಗೆ ಸಾಕಷ್ಟು ಸಹಾಯ ಮಾಡುತ್ತಿತ್ತು. ಹೊಲಕ್ಕೆ ಗೊಬ್ಬರವನ್ನು ಒಯ್ಯುವದು, ಹೊಲದಿಂದ ಬಾರ್ಲಿ ಮತ್ತು ಗೋದಿ ಬೆಳೆಯನ್ನು ಮನೆಗೆ ತರುವದು ಇದರದೇ ಕೆಲಸ. ಕೆಲವೊಮ್ಮೆ ಪದ್ಮಾಳ ತಮ್ಮ, ನೋನೋನನ್ನು ಬೆನ್ನಿನ ಮೇಲೆ ಕೂಡಿಸಿಕೊಂಡು ಹೋಗುವದು ಕೂಡ ಇದರದೇ ಕೆಲಸ. ಬುಂಬೂನಿಗೆ ಈ ಕೆಲಸ ಹಿಡಿಸುತ್ತಿತ್ತು. ಗೊಬ್ಬರದ ಬುಟ್ಟಿಗಿಂತ ನೋನೋ ಬಹಳ ಹಗುರನು. ಅಲ್ಲದೆ ಹೋಗುವಾಗ ಆತ ಹಾಡುಗಳನ್ನು ಹಾಡಿ ಮನ ರಂಜಿಸುತ್ತಿದ್ದನು.

ಬುಂಬೂವಿನ ಮೇಲೆ ಪದ್ಮಾಳ ಒಲವು ಹೆಚ್ಚು ಇತ್ತು. ಅವಳು ಅದರ ಕಾಳಜಿ ತೆಗೆದುಕೊಳ್ಳುತ್ತಿದ್ದಳು. ಸಂಜೆ ಯಾಗುವದರ ಮೊದಲೇ ಅದು ಮನೆಗೆ ತಿರುಗಿ ಬರುವದರ ಬಗ್ಗೆ ಖಚಿತ ಪಡಿಸುತ್ತಿದ್ದಳು. ಯಾರ ಭರವಸೆ? ಹಳ್ಳಿಯ ಸಮೀಪದಲ್ಲಿ ತಿರುಗುತ್ತಿರುವ ಹಿಮ ಚಿರತೆ ಅದನ್ನು ತಿನ್ನಬಹುದೆಂದು ಅವಳಿಗೆ ಅಳುಕು.

ಬುಂಬೂ ದೊಡ್ಡದಾದಂತೆ ಅದು ಇತರ ಪ್ರಾಣಿಗಳಿಗಿಂತ ಬೇರೆ ರೀತಿಯಲ್ಲಿ ವಿಚಿತ್ರವಾಗಿ ವರ್ತಿಸುತ್ತಿರುವದು ಪದ್ಮಾಳ ಗಮನಕ್ಕೆ ಬಂತು. ಪದ್ಮಾಳ ಮನೆಯ ಕೊಟ್ಟಿಗೆಯಲ್ಲಿ ಕುರಿಗಳು, ಆಡುಗಳು ಮತ್ತು ಒಂದು ಆಕಳು ಇದ್ದವು. ಕೊಟ್ಟಿಗೆ ಸಾಕಷ್ಟು ದೊಡ್ಡದಿತ್ತು. ಈ ಪ್ರಾಣಿಗಳ ಮುಂದೆ ಕುಡಿಯಲು ಸಾಕಷ್ಟು ನೀರು ಇದೆ ಎಂಬುದನ್ನು ಅವಳು ಮಲಗುವ ಮುನ್ನ ಖಚಿತ ಪಡಿಸುತ್ತಿದ್ದಳು. ಕೊಟ್ಟಿಗೆ ಸ್ವಚ್ಛವಾಗಿಡುವದರ ಬಗ್ಗೆ ಕಾಳಜಿ ವಹಿಸುತ್ತಿದ್ದಳು.

ಪದ್ಮಾ ಈ ಕೊಟ್ಟಿಗೆಯಲ್ಲಿಯ ಕೆಲಸ ಮಾಡುತ್ತಿದ್ದಾಗ ಸೂರ್ಯನು ಮುಳುಗಿದ ಮೇಲೆ ಬುಂಬೂ ವಿಚಿತ್ರವಾಗಿ ವರ್ತಿಸುತ್ತಿರುವನ್ನು ಅವಳು ಕಂಡಳು. ಆಡು, ಕುರಿಗಳು ಇವಳು ಕೆಲಸ ಮಾಡುವಾಗ ಇವಳ ಬೆನ್ನ ಹಿಂದೆ ತಿರುಗುತ್ತಿದ್ದವು. ಆದರೆ ಬುಂಬೂ ಮಾತ್ರ ಕಾಲ್ಮೊಳಗಳನ್ನು ಮಣಿಸಿ ಬಿದ್ದು ಬಿಡುತ್ತಿತ್ತು. ಯಾವದೇ ಚಲನೆ ಇರುತ್ತಿರಲಿಲ್ಲ. ಆದರೆ ಮರು ಮುಂಜಾನೆ ನೋಡಿದಾಗ ತನ್ನ ಜಾಗದಲ್ಲಿಯೇ ಬುಂಬೂ ಇರುವದನ್ನು ನೋಡಿ ಅವಳಿಗೆ ಸೋಜಿಗವಾಗುತ್ತಿತ್ತು.

‘‘ಓಹ, ಬುಂಬೂ ನೀನು ಚೆನ್ನಾಗಿ ನಿದ್ದೆ ಮಾಡಿದಂತೆ ಕಾಣುತ್ತದೆ. ಎಲ್ಲಿಯೂ ಅಲುಗಾಡಲೇ ಇಲ್ಲವಲ್ಲ.?” ಅವಳು ಅದನ್ನು ಅಪ್ಪಿಕೊಂಡು ಮಾತಾಡಿಸುತ್ತಿದ್ದಳು. ಪದ್ಮಾಳಿಗೆ ಅದರ ದೊಡ್ಡ ದೊಡ್ಡ, ಮೃದುವಾದ ಕಣ್ಣುಗಳ ಮೇಲೆ ಇಷ್ಟ. ಬುಂಬೂ ಹುಟ್ಟಿದಾಗ ಯಾವನೋ ಕಲಾವಂತನು ಬಂದು ಇದರ ಮುಖದ ಮೇಲೆ ಈ ಕಣ್ಣುಗಳನ್ನು ಮೂಡಿಸಿ ಹೋಗಿದ್ದಾನೆ ಎಂದು ಅವಳಿಗೆ ಅನ್ನಿಸುತ್ತಿತ್ತು.

ಒಂದು ದಿನ ಪದ್ಮಾ ಮತ್ತು ಅವಳ ಮನೆಯವರೆಲ್ಲರು ಮಗ್ಗಲ ಹಳ್ಳಿಯಲ್ಲಿಯ ಜಾತ್ರೆಗೆಂದು ಹೊರಬಿದ್ದರು. ಬೆಟ್ಟದ ಮೇಲಿನ ಸುತ್ತುಸುತ್ತಾದ ಹಾದಿ. ಬುಂಬೂ ನೋನೋನನ್ನು ಬೆನ್ನಿನ ಮೇಲೆ ಕೂಡಿಸಿಕೊಂಡಿತ್ತು. ಕುರಿಯಂತೆ ಬುಂಬೂವಿನ ಪಾದಗಳು ಕೂಡ ಪರ್ವತದ ಮೇಲೆ ನಡೆಯಲಿಕ್ಕೆ ಅನುವಾಗುವ ಹಾಗೆ ಇದ್ದವು.

ಜಾತ್ರೆ ಮುಗಿದ ಮೇಲೆ ಎಲ್ಲರು ಗುಂಪು ಗುಂಪಾಗಿ ಮನೆಗೆ ಹಿಂತಿರುಗುತ್ತಿದ್ದರು. ಜಾತ್ರೆಯಲ್ಲಿ ಸಾಕಷ್ಟು ಮೋಜು ಮಾಡಿದ್ದರಿಂದ ತಿರುಗಿ ಹೊರಡಲು ಸ್ವಲ್ಪ ವೇಳೆಯಾಗಿತ್ತು. ಮನೆ ಮುಟ್ಟಲು ಇನ್ನೂ ಎರಡು ಗಂಟೆ. ಮುಸ್ಸಂಜೆಯಾಗುತ್ತಿದ್ದಂತೆ ಬುಂಬೂ ದಾರಿಯಲ್ಲಿಯ ಕಲ್ಲುಗಳ ಮೇಲೆ ಎಡವತೊಡಗಿತು ಹಾಗು ಹಿಂದೆ ಉಳಿಯತೊಡಗಿತು. ಪದ್ಮಾ ಅದರ ಕೊರಳಲ್ಲಿ ಕೈಸುತ್ತಿ "ಬುಂಬೂ ದಣಿದಿದ್ದಿಯಾ? ನಿನಗೆ ಏನು ತೊಂದರೆ?" ಎಂದು ಅದರ ಕಿವಿಯಲ್ಲಿ ಕೇಳಿದಳು.

ಸಂಜೆಯ ಕತ್ತಲು ಕವಿಯುತ್ತಿದ್ದಂತೆ ಬುಂಬೂ ಪದ್ಮಾಳ ಹತ್ತಿರದಿಂದ ನಡೆಯತೊಡಗಿತು. ಸುತ್ತಲೆಲ್ಲ ಕತ್ತಲೆ. ನಿಶ್ಚಲವಾದ ಬುಂಬೂ ದೊಡ್ಡ ದನಿಯಲ್ಲಿ ಒದರತೊಡಗಿತು.

“ಇದಕ್ಕೆ ಏನಾಗಿದೆ?” ಪದ್ಮಾಳ ತಂದೆ, ಆಬಾ-ಲೇ ಕೇಳಿದರು. “ಇದರ ನಡಿಗೆಯನ್ನು ನಾನು ವೀಕ್ಷಿಸುತ್ತಿದ್ದೆ. ಛಾಂಗ (ಸೆರೆ) ಕುಡಿದಂತೆ ಇದರ ನಡುಗೆ ಇದೆ.” ಸ್ವಲ್ಪ ಸಿಟ್ಟಿನಿಂದ ನುಡಿದರು.

“ಇದೆಲ್ಲ ಬೇನೆ ಬಿದ್ದ ಲಕ್ಷಣ!' ಪದ್ಮಾಳ ತಾಯಿ, ಆಮಾ-ಲೇ ಎಂದೆನ್ನುತ್ತ ನಿಟ್ಟುಸಿರು ಬಿಟ್ಟಳು.

ಪದ್ಮಾ ಅದರ ಕೊರಳಿಗೆ ಜೋತು ಬಿದ್ದಳು. ಈ ಮೊದಲು ಎಷ್ಟೋ ಸಲ ದನಿ ಮಾಡಿದಂತೆ ಟುಕ್,ಟುಕ್,ಟುಕ್ ಎಂದು ದನಿ ಮಾಡುತ್ತ ಅದನ್ನು ಬೇಗನೆ ಎಬ್ಬಿಸಲು ಪ್ರಯತ್ನಿಸಿದಳು.
ಆದರೆ ಬುಂಬೂ ಒಂದಂಗುಲ ಕೂಡ ಸರಿಯಲೇ ಇಲ್ಲ. ಅದು ಮುಂದೆ ಹೆಜ್ಜೆ ಇಡಬೇಕೆಂದು ಏನೇನು ಮಾಡುವದು ಸಾಧ್ಯವೇ ಅದೆಲ್ಲವನ್ನು ಅವಳು ಮಾಡಿದಳು; ಕೊರಳಿಗೆ ಕಟ್ಟಿದ ಹಗ್ಗವನ್ನು ಜಗ್ಗಿದಳು, ಅದರ ಮುಖದ ಮುಂದೆ ಗಜ್ಜರಿ ಹಿಡಿದಳು. ಆದರೂ ಬುಂಬೂ ತುಸು ಕೂಡ ಅಲುಗಾಡಲಿಲ್ಲ. ಜೋರಾಗಿ ಕಿರುಚುತ್ತ ಅದು ಮೊಣಕಾಲುಗಳನ್ನು ಮಣಿಸಿ ಕುಸಿದು ಬಿತ್ತು. ಆಬಾ-ಲೇ ಸಿಟ್ಟಿಗೆದ್ದರು. ಜೋರಾಗಿ ಅದನ್ನು ಜಗ್ಗತೊಡಗಿದರು. ಆದರೆ ಕಲ್ಲು ಬಂಡೆಯಂತೆ ಕುಳಿತ ಬುಂಬೂ ಸ್ವಲ್ಪಕೂಡ ಸರಿಯಲಿಲ್ಲ.

ಪದ್ಮಾ ಆ ಕರಾಳ ರಾತ್ರಿಯನ್ನು ಎಂದಿಗೂ ಮರೆಯಲು ಶಕ್ಯವಿಲ್ಲ. ಪದ್ಮಾಳ ಒತ್ತಾಯ, ಆಬಾ-ಲೇಯ ಬೈಗಳು ಹಾಗು ಆಮಾ-ಲೇಯ ಶಾಪ ಈ ಯಾವದೇ ಉಪಾಯಗಳು ಬುಂಬೂನ ಮೇಲೆ ಪರಿಣಾಮ ಬೀರಲಿಲ್ಲ. ಆಬಾ-ಲೇ ಹೊರತಾಗಿ ಮನೆಯ ಉಳಿದ ಜನ ಹಳ್ಳಿಗೆ ಮುಂದೆ ಹೋದರು. ಮರುದಿನ ಮುಂಜಾನೆ ನಿದ್ದೆಗಣ್ಣಿನಲ್ಲಿ ಕಣ್ಣು ಒರೆಸುತ್ತ ಆಬಾ-ಲೇ ಹಳ್ಳಿಗೆ ಮರಳಿದರು. ಅವರ ಹಿಂದೆಯೇ ಬುಂಬೂ ಶಾಂತ ಚಿತ್ತದಿಂದ ಬರುತ್ತಿತ್ತು! "ಇದೊಂದು ವಿಚಿತ್ರ ಕತ್ತೆ. ಅದು ಚೆನ್ನಾಗಿ ಗೊರಕೆ ಹೊಡೆಯುತ್ತ ನಿದ್ದೆ ಮಾಡಿತು. ನನಗೆ ರಾತ್ರಿ ಎಲ್ಲಾದರೂ ಚಿರತೆ-ತೋಳಗಳು ಬಂದು ಇದನ್ನು ಕೊಂದರೆ ಹೇಗೆ ಎಂಬುದರದೇ ಚಿಂತೆ!' ಆಬಾ-ಲೇ ಹೇಳುತ್ತಿದ್ದರು.

ಆಬಾ-ಲೇ ಜಳಕ ಮುಗಿಸಿ ಚಹ ಕುಡಿಯುತ್ತಿರುವಾಗ ಪದ್ಮಾ ಬುಂಬೂವಿನ ವಿಚಿತ್ರ ನಡೆವಳಿಕೆ ಬಗ್ಗೆ ಹೇಳತೊಡಗಿದರು. ಇದೆಲ್ಲವನ್ನು ಅವಳು ಕೊಟ್ಟಿಗೆಯಲ್ಲಿ ಅನುಭವಿಸಿದ್ದಳು. ಸಂಜೆಯಾದಂತೆ ಬುಂಬೂವಿನ ನಡತೆ ಬದಲಿಸುತ್ತಿತ್ತು. ಬುಂಬೂ ಮೊಳ್ಕಾಲುಗಳನ್ನು ಮಡಿಚಿ ಕುಸಿದು ಬೀಳುತ್ತಿತ್ತು. ಆದರೆ ಬೆಳಿಗ್ಗೆ ಮತ್ತೆ ಹುಷಾರಾಗುತ್ತಿತ್ತು.

ಆಬಾ-ಲೇ ಕಿವಿಗೊಟ್ಟು ಪದ್ಮಾ ಹೇಳಿದ್ದನ್ನೆಲ್ಲ ಆಲಿಸಿದನು. "ನಿನ್ನೆ ರಾತ್ರಿ ಇದೇ ಆಗಿರಬೇಕು." ಮತ್ತೊಂದು ಕಪ್ ಚಹ ಕುಡಿಯುತ್ತ "ಇದೆಲ್ಲ ವಿಚಿತ್ರ. ನಾನು ಆಮ್ಚಿ(ವೈದ್ಯ)ಯನ್ನು ಕಾಣಬೇಕು." ಎಂದು ನುಡಿದರು.

ಮುಂದೆ ಒಂದು ವಾರದ ಮೇಲೆ ಆಬಾ-ಲೆ ಚಿಂತೆಯಲ್ಲಿದ್ದಂತೆ ಕಾಣುತ್ತಿತ್ತು. ಆಮಾ-ಲೇ ಸಂಜೆಯ ಊಟಕ್ಕಾಗಿ ಥುಕ್ಪಾ ಮಾಡುತ್ತಿರುವಾಗ ಪದ್ಮಾ ಉಳಿದ ಕೆಲಸ ಮಾಡುತ್ತಿದ್ದಳು. ಆಮಾ-ಲೇ ಮತ್ತು ಪದ್ಮಾ "ಏನಾಯಿತು?" ಎಂದು ಕೇಳಿದರು.

"ಸರಿ, ನಾನು ಆಮ್ಚಿಯನ್ನು ಇಂದು ಭೆಟ್ಟಿಯಾದೆ. ಬುಂಬೂನಿಗೆ ರಾತ್ರಿ ಏನೂ ಕಾಣದಿರುವ ಬೇನೆ ಬಂದಿರಬೇಕು. ಇದಕ್ಕೆ ಇರುಳುಕುರುಡು ಎಂದೆನ್ನುತ್ತಾರೆ. ಎಷ್ಟೋ ಮನುಷ್ಯರಲ್ಲಿ ಕೂಡ ಈ ಬೇನೆ ಇರುತ್ತದೆ."

"ಇರುಳುಕುರುಡು! ಅಯ್ಯೋ ದೇವರೇ! ಇದೇನಿದು!" ಆಮಾ-ಲೇ ಕನಿಕರಪಟ್ಟು ಗಂಡನನ್ನು ಕೇಳಿದಳು.

“ಸರಿ, ಕೆಲ ಪ್ರಾಣಿಗಳಿಗೆ ಹುಟ್ಟಿದಾಗಿನಿಂದ ಈ ಬೇನೆ ಅಂಟಿಕೊಂಡಿರುತ್ತದೆ. ದಿನವೆಲ್ಲ ಅವುಗಳ ಕಣ್ಣುಗಳು ಸರಿಯಾಗಿ ಇರುತ್ತವೆ. ಆದರೆ ಇರುಳಿನ ಕತ್ತಲಲ್ಲಿ ಅವುಗಳಿಗೆ ಸರಿಯಾಗಿ ಕಾಣುವದಿಲ್ಲ. ಬುಂಬೂ ಚಿಕ್ಕದಿದ್ದಾಗ ಏನಾದರೂ ಗಮನಕ್ಕೆ ಬಂದಿತ್ತೇ? ಎಂದು ಆಮ್ಟಿ ಕೇಳುತ್ತಿದ್ದರು.”
ಆಮಾ-ಲೇ ಕಣ್ಣುಗಳನ್ನು ದಿಟ್ಟಿಸಿ “ಅಯ್ಯೋ! ಈಗ ನೆನಪಾಯಿತು. ಅದು ಚಿಕ್ಕಮರಿ ಇದ್ದಾಗ ಅಂಗೈ ಮೇಲಿನ ಅನ್ನವನ್ನು ನಾನು ಸಂಜೆಯಾದ ಮೇಲೆ ತಿನ್ನಿಸುತ್ತಿದ್ದೆ. ಆದರೆ ಅದು ಸರಿಯಾಗಿ ತಿನ್ನುತ್ತಿರಲಿಲ್ಲ.”

“ಆಬಾ-ಲೇ, ಬುಂಬೂನನ್ನು ಕೊಟ್ಟಿಗೆಯಲ್ಲಿ ಕಟ್ಟಬೇಕಾದರೆ ಎಷ್ಟೋ ಸಲ ಅದನ್ನು ನೂಕಬೇಕಾಗುತ್ತಿತ್ತು. ನನಗೆ ಅದು ತುಂಟತನ ಮಾಡುತ್ತದೆ ಎಂದೆನ್ನಿಸುತ್ತಿತ್ತು. ನೋನೋ ಮಾಡುತ್ತಿದ್ದ ಹಾಗೆ ತುಂಟತನ. ನಿಮಗೆ ನೆನಪಿದೆಯೇ? ನೋನೋ ರಾತ್ರಿ ಬೇಗ ಮಲಗುತ್ತಿರಲಿಲ್ಲ. ಆಮಾ-ಲೇ ಒತ್ತಾಯ ಮಾಡಿ ಮಲಗಿಸಿದರೂ ಮಲಗಿದ್ದಲ್ಲೇ ಕಣ್ಣು ತೆರೆದು ಮಲಗುತ್ತಿದ್ದನು.” ಪದ್ಮಾ ಬೆರಳಿನಿಂದ ದೊಡ್ಡ ಕಣ್ಣು ಮಾಡಿ ಹೇಳುತ್ತಿದ್ದಳು. “ನನಗೂ ಬುಂಬೂಗೆ ನಿದ್ದೆ ಬೇಕಿಲ್ಲ, ರಾತ್ರಿ ಎಲ್ಲ ಕಣ್ಣು ತೆರೆದೇ ಇರಬೇಕೆಂದು ಅದಕ್ಕೆ ಅನ್ನಿಸುತ್ತಿರಬೇಕು. ಎಂದೆನ್ನಿಸುತ್ತಿತ್ತು.”

“ಸರಿ, ಇದರರ್ಥ ಬುಂಬೂನಿಗೆ ಚಿಕ್ಕದಿದ್ದಾಗಲೇ ಈ ಸಮಸ್ಯೆ ಇರಬೇಕು. ಆಮ್ಚಿ ಇದಕ್ಕೆ ಏನು ಉಪಚಾರವಿಲ್ಲ ಎಂದು ಹೇಳಿದರು. ಮುಂದಿನ ಸೀಜನ್ನಿನಲ್ಲಿ ನಾವು ಇದನ್ನು ಬೆಟ್ಟದ ಮೇಲೆ ಒಯ್ಯುವದು ಬೇಡ. ಇದು ನಿರುಪಯೋಗಿ. ಕೆಲಸಕ್ಕೆ ಬಾರದ್ದು ‘‘ ಆಬಾ-ಲೇ ಹೇಳಿದರು.

ಪದ್ಮಾ ತಮ್ಮ ತಂದೆಯನ್ನು ದಿಟ್ಟಿಸಿ ನೋಡತೊಡಗಿದಳು. ಅವಳ ಮುಖದ ಮೇಲೆ ಗಾಬರಿಯಾದ ಲಕ್ಷಣ. ಬುಂಬೂನಿಗೆ ನಿರುಪಯೋಗಿ, ಕೆಲಸಕ್ಕೆ ಬಾರದ್ದು ಎಂದು ಹೇಳಿದ್ದು ಅವಳಿಗೆ ಹಿಡಿಸಲಿಲ್ಲ. ಸ್ವಲ್ಪ ಧೈರ್ಯ ಮಾಡಿ “ನೀವು ಇದಕ್ಕೆ ನಿರುಪಯೋಗಿ ಎಂದು ಹೇಗೆ ಹೇಳುವಿರಿ?” ಎಂದು ಪ್ರಶ್ನಿಸಿದಳು.

'ನೋಡು, ಮಗು. ಬುಂಬೂನಿಗೆ ದಿನಾಲು ಉಣ್ಣಿಸಬೇಕು. ಸರಿಯೇ, ಟ್ರೇಕ್ಕರ್ಸಗಳು ಬಂದ ಸೀಜನ್ನಿನಲ್ಲಿ ಗುಡ್ಡ-ಕೊಳ್ಳಗಳನ್ನು ಹತ್ತದಿದ್ದರೆ ಇದನ್ನು ಏಕೆ ಇಟ್ಟುಕೊಳ್ಳಬೇಕು? ಇದನ್ನು ಮಾರಿ ಬೇರೆ ಕತ್ತೆ ಇಲ್ಲವೆ ಕುದುರೆ ಕೊಂಡುಕೊಳ್ಳುವ!” ತಂದೆ ಹೇಳತೊಡಗಿದರು.

ಪದ್ಮಾಳ ಊಹೆ ಸರಿಯಾಗಿತ್ತು. “ಆಬಾ-ಲೇ ದಯಮಾಡಿ ಬುಂಬೂವನ್ನು ಮಾರಬೇಡಿ” ಎಂದು ಆಬಾ-ಲೇಯನ್ನು ಅಪ್ಪಿಕೊಂಡು ಅಂಗಲಾಚಿದಳು.

ಆಬಾ-ಲೇನಿಗೆ ಮಗಳ ಭಾವನಾವಿವಶತೆ ತಿಳಿಯಲಿಲ್ಲ. “ಪದ್ಮಾ, ಸ್ವಲ್ಪ ತಿಳಿವಳಿಕೆಯವಳಾಗು. ನಾವು ಬುಂಬೂನಂತಹ ಪ್ರಾಣಿಗಳನ್ನು ಸಾಕುವಷ್ಟು ಶ್ರೀಮಂತರಿಲ್ಲ.” ಎಂದೆನ್ನುತ್ತ ಹೊರಹೋದರು.

ಆ ರಾತ್ರಿ ಕೊಟ್ಟಿಗೆಯಲ್ಲಿಯ ಕೆಲಸ ಮಾಡುತ್ತಿದ್ದಾಗ ಪದ್ಮಾಳ ಕಣ್ಣಲ್ಲಿ ಕಣ್ಣೀರು ಸುರಿಯುತ್ತಿದ್ದವು. ಒಂದು ಮೂಲೆಯಲ್ಲಿ ಮಲಗಿದ್ದ ಬುಂಬೂವನ್ನು ಕಂಡು ಅವಳಿಗೆ ಕೆಟ್ಟೆನ್ನಿಸಿತು. “ಪಾಪ, ಬುಂಬೂ!” ಅವಳು ಬುಂಬೂನ ಹತ್ತಿರ ಹೋಗಿ ಅಪ್ಪಿಕೊಂಡಳು. “ಓಹ, ನೀನು ನನ್ನ ಮನೆಯವನಲ್ಲ ಎಂಬುದನ್ನು ನಾನು ಸಹಿಸಲಾರೆ. '' ಬುಂಬೂ ಅಲುಗಾಡಲಿಲ್ಲ.

ಮುಂದೆರಡು ವಾರಗಳಾದ ಮೇಲೆ ಪದ್ಮಾ ದನ-ಕರುಗಳನ್ನು ಮೇಯಿಸಲು ಬೆಟ್ಟದ ಮೇಲೆ ಹೋಗಿದ್ದಳು. ಅವಳ ಕಣ್ಣಲ್ಲಿ ದುಃಖ ತುಂಬಿತ್ತು. ಆ ದಿನ ಮುಂಜಾನೆ ಆಬಾ-ಲೇ ಬುಂಬೂವನ್ನು ಮಾರುವ ನಿರ್ಣಯವನ್ನು ಆಮಾ-ಲೇಗೆ ಹೇಳುತ್ತಿರುವದನ್ನು ಅವಳು ಕೇಳಿದ್ದಳು. ಪದ್ಮಾ ಕೆಳಗೆ ಕುಳಿತು ಅಳತೊಡಗಿದಳು.

ಅಷ್ಟರಲ್ಲಿ ಒಮ್ಮಿಂದೊಮ್ಮೆಲೆ "ಪದ್ಮಾ, ನೀನೇಕೆ ಅಳುತ್ತಿ?" ಎಂಬ ದನಿ ಅವಳಿಗೆ ಕೇಳಿಸಿತು. ಅವಳು ಎಲ್ಲೆಡೆ ಕಣ್ಣು ಹಾಯಿಸಿದಳು. ಅವಳೆದುರಿಗೆ ಸ್ವಾಂಝಿನ ನಿಂತಿದ್ದ. ಸ್ವಾಂಝಿನ ಇವಳ ದೂರದ ನೆಂಟ. ಅವನ ಬೆನ್ನಿನ ಮೇಲೆ ಜಡವಾದ ರಕ್ ಸ್ಯಾಕ ಇತ್ತು. "ಮನೆಯಲ್ಲಿ ಎಲ್ಲರೂ ಸೌಖ್ಯವಾಗಿದ್ದಾರೆಯೇ?" ಅವಳ ಗಲ್ಲದ ಮೇಲಿನ ಕಣ್ಣೀರು ಒರೆಸುತ್ತ ಕೇಳಿದನು.



ಪದ್ಮಾ ಸ್ವಾಂಯ್ಥಿನನ್ನು ನೋಡತೊಡಗಿದಳು. ಆತ ಈ ಮೊದಲಿಗಿಂತ ಎತ್ತರವಾಗಿದ್ದ. ಆದರೆ ಅವನ ಕಣ್ಣುಗಳು ಮಾತ್ರ ಮೃದುವಾಗಿದ್ದವು. ಬುಂಬೂನಂತೆ. ಅವಳು ಮನಸ್ಸಿನಲ್ಲಿ ಅಂದುಕೊಂಡಳು. ಮತ್ತೇ ಅಳತೊಡಗಿದಳು. "ನನ್ನ ಕತ್ತೆ..." ಅವಳ ಕೊರಳಿನಿಂದ ದನಿ ಬರಲಿಲ್ಲ. ದೂರದಲ್ಲಿ ಮೇಯುತ್ತಿರುವ ಬುಂಬೂನೆಡೆ ಬೆರಳು ತೋರಿಸಿದಳು.

ಸ್ವಾಂಯ್ಥಿನನು ಅದನ್ನು ನೋಡಿ "ಇದಕ್ಕೆ ಹುಷಾರಿಲ್ಲವೇ?"

ಪದ್ಮಾ ತಲೆ ಅಲ್ಲಾಡಿಸಿ, "ಅಹುದು... ಇಲ್ಲ... ಅದಕ್ಕೆ ಸರಿಯಿಲ್ಲ. ಅದಕ್ಕೆ ಇರುಳುಕುರುಡಾಗಿದೆ. ಹಾಗು ನನ್ನ ತಂದೆ ಇದನ್ನು ಮಾರುವವರಿದ್ದಾರೆ.." ಬಿಕ್ಕಿ ಬಿಕ್ಕಿ ಅವಳು ಹೇಳಿದಳು.

"ಇರುಳುಕುರುಡು ಅಂದರೆ?' ಅಚ್ಚರಿಯಿಂದ ಸ್ವಾಂಯ್ಥಿನ ಕೇಳಿದನು.

"ರಾತ್ರಿಯಾದ ಮೇಲೆ ಕಣ್ಣು ಕಾಣುವದಿಲ್ಲವಂತೆ, ಎಂದು ತಂದೆ ಹೇಳುತ್ತಿದ್ದರು. ದಿನವೆಲ್ಲ ಸರಿಯಾಗಿ ನೋಡುವ ಜನರಿಗೆ ರಾತ್ರಿಯಾದ ಮೇಲೆ ಕಾಣದಿದ್ದರೆ ಅವರಿಗೆ
ಇರುಳುಕುರುಡರು ಎಂದೆನ್ನುತ್ತಾರೆ." ಪದ್ಮಾ ನಿಟ್ಟುಸಿರು ಬಿಟ್ಟು ಹೇಳುತ್ತಿದ್ದಳು.



“ಓಹ! ಎಷ್ಟೊಂದು ವಿಚಿತ್ರ. ದಿನವೆಲ್ಲ ನೋಡಬಹುದು ಆದರೆ ರಾತ್ರಿಯಲ್ಲಿ ಇಲ್ಲ.”

“ಅಹುದು. ಇದು ವಿಚಿತ್ರವೇ.” ಪದ್ಮಾ ಈ ಕೆಲವಾರಗಳಲ್ಲಿ ನಡೆದ ಎಲ್ಲ ಪ್ರಸಂಗಗಳನ್ನು ಬಣ್ಣಿಸಿ ಹೇಳಿದಳು.

“ಆದರೆ ಅದನ್ನು ನಿನ್ನ ತಂದೆ ಏಕೆ ಮಾರುತ್ತಾರೆ?”.

“ಬಾ-ಲೇಗೆ ಇದು ಮುಂದಿನ ಟ್ರೆಕ್ಕಿಂಗ ಸೀಜನ್ನಿನಲ್ಲಿ ತೊಂದರೆಗೆ ಈಡು ಮಾಡಬಹುದೆಂದು ಅಂಜಿಕೆ. ರಾತ್ರಿಯಾದಾಗ ಬುಂಬೂ ಅಲುಗಾಡುವದಿಲ್ಲ. ಕಲ್ಲಿನಂತೆ ನಿಶ್ಚಲವಾಗುತ್ತದೆ.” ಪದ್ಮಾ ಹೇಳಿದಳು.

“ಹಾಗಾದರೆ ನಿನಗೆ ಇದನ್ನು ಮಾರುವ ಇಚ್ಛೆ ಇಲ್ಲ!' ಸ್ವಾಂಯ್ಘಿನ ಕೇಳಿದನು.

“ಇಲ್ಲ ಇದು ನನಗೆ ತಮ್ಮನಂತಿದೆ. ಹುಟ್ಟಿದಾಗಿನಿಂದ ಅದು ನಮ್ಮ ಮನೆಯಲ್ಲಿದೆ. ಇದು ಹುಟ್ಟಿದಾಗಲೇ ಇದರ ತಾಯಿ ತೀರಿಕೊಂಡಳು. ಇದನ್ನು ನಾನು ಬಿಟ್ಟಿರಲಾರೆ.” ಪದ್ಮಾ ಹೇಳಿದಳು.

ಸ್ವಾಂಯಿಝಿನ ತನ್ನ ರಕ್ ಸ್ಯಾಕನ್ನು ಧರಿಸಿದನು. ಹಾಗು ಪದ್ಮಾಳ ಮಗ್ಗಲಲ್ಲಿ ಕುಳಿತು ಸುತ್ತಲೂ ನೋಡತೊಡಗಿದನು. ಸುತ್ತಲೆಲ್ಲ ಪರ್ವತಗಳೇ ಪರ್ವತಗಳು. ನೀಲಿ ಮುಗಿಲ ಕೆಳಗೆ ಹಸಿರು ತುಂಬಿದ ಹುಲ್ಲುಗಳ ರಾಶಿ. ಅದರ ಮೇಲೆ ಬಂಗಾರ ಬಣ್ಣದ ಹೂವುಗಳು. ಪ್ರಕೃತಿ ಸೌಂದರ್ಯ ವಿಸ್ಮಯಗೊಳಿಸುತ್ತಿತ್ತು. ಅವನ ಕಣ್ಣುಗಳು ಬುಂಬೂನ ಮೇಲೆ ಹರಿದವು. ಬುಂಬೂ ಸುಮ್ಮನಿದ್ದು ಮೇಯುತ್ತಿತ್ತು. ಅದಕ್ಕೆ ಅದರ ಮುಂದಿನ ಪಾಡಿನ ಕಲ್ಪನೆ ಇರಲಿಲ್ಲ. ಪದ್ಮಾಳ ಕಣ್ಣಲ್ಲಿ ಕಣ್ಣೀರಿದ್ದವು. ಆತನಿಗೆ ಅವನನ್ನು ತಗಲಿ ಹೋದ ತನ್ನಲ್ಲಿಯ ಕತ್ತೆಯ ನೆನಪಾಯಿತು.

“ಇಂದು ರಾತ್ರಿ ನೀನು ಎಲ್ಲಿ ಇರುವೆ?” ಪದ್ಮಾ ಸ್ವಾಂಯಿಝಿನನ್ನು ಕೇಳಿದಳು. “ನಮ್ಮಲ್ಲಿ ಬಂದು ಇರಬಹುದು.”

“ಆದರೆ ನಾನು ಮುಖ್ಯಸ್ಥನ ಮನೆಯಲ್ಲಿರುವೆ. ಇಬ್ಬರು ಹೊರಗಿನ ದೇಶದಿಂದ ಬಂದಿದ್ದಾರೆ. ಅವರನ್ನು ಟ್ರೆಕಿಂಗಕ್ಕೆ ಒಯ್ಯಬೇಕಾಗಿದೆ. ಹಾಗು ನಾನು ಗೈಡು ಎಂದು ಅವರ ಜತೆ ಹೋಗಬೇಕು.”

“ಊಟಕ್ಕಾದರೂ ಬಾ. ಬಾ-ಲೇ ಮತ್ತು ಮಾ-ಲೇಗೆ ನಿನ್ನನ್ನು ಕಂಡು ಸಂತಸವಾಗುವದು. “

“ಪದ್ಮಾ, ಮುಂದಿನ ಸಲ ಬರುತ್ತೇನೆ. ಈ ಸಲ ಬೇಡ. ಇಂದು ರಾತ್ರಿಯೇ ಟ್ರೆಕಿಂಗ ಸಾಹಿತ್ಯವನ್ನು ಕೂಡಿಸಿ ಇಡಬೇಕಾಗಿದೆ. ಬರಲಿಕ್ಕೆ ತಡವಾಗಬಹುದು.” ಹೀಗೆ ಹೇಳುತ್ತ ಅವನು ಹಳ್ಳಿಯ ಹಾದಿಯನ್ನು ಹಿಡಿದನು.

ಆ ರಾತ್ರಿ ಪದ್ಮಾ ಕೊಟ್ಟಿಗೆಯಲ್ಲಿ ದನ ಕರುಗಳಿಗೆ ಮೇವು ಹಾಕುತ್ತಿದ್ದಳು. ಅಷ್ಟರಲ್ಲಿ "ಜುಲ್ಲಿ, ಪದ್ಮಾ, ನಾನು ಸ್ವಾಂಘಿನ!" ಎಂಬ ದನಿ ಕೇಳಿಸಿತು.

"ಇಲ್ಲಿ ನೀನು ಏನು ಮಾಡುತ್ತಿರುವೆ?" ಅಚ್ಚರಿಯಿಂದ ಪದ್ಮಾ ಕೇಳಿದಳು.

ಸ್ವಾಂಘಿನ ಒಳಗೆ ಬಂದು "ಬುಂಬೂಗಾಗಿ ನನ್ನ ಹತ್ತಿರ ಒಂದು ಉಪಾಯವಿದೆ."

"ಏನು.. ಏನಿದೆ ಆಮ್ಚಿಯ ಮದ್ದಿದೆಯೇ?" ಪದ್ಮಾ ಹುಲ್ಲನ್ನು ಕೆಳಗಿಡುತ್ತ ಕೇಳಿದಳು.

"ಇದು ಮದ್ದಲ್ಲ. ನನ್ನ ಚೀಲದಲ್ಲಿ ಇದೆ. ಅದು ಬುಂಬೂವಿನ ಕಣ್ಣುಗಳನ್ನು ಸರಿ ಮಾಡಬಹುದು. ಕಣ್ಣುಗಳು ಸರಿಯಾದರೆ ಅದನ್ನು ಮಾರಬೇಡವೆಂದು ನಿನ್ನ ತಂದೆಗೆ ಹೇಳು."

"ಏನಿದೆ? ನನಗೆ ಹೇಳು."

"ಬುಂಬೂನನ್ನು ಹೊರಗಿನ ದಾರಿಯ ಮೇಲೆ ತಗೊಂಡು ಬಾ. ಈ ವಸ್ತುವಿನ ಪರೀಕ್ಷೆ ತೆಗೆದುಕೊಳ್ಳುವಾ!" ಸ್ವಾಂಘಿನ ನಗು ನಗುತ್ತ ಹೇಳಿದನು.

"ಸ್ವಾಂಘಿನ ಅದಕ್ಕೆ ರಾತ್ರಿ ಕಾಣುವದಿಲ್ಲ. ಬುಂಬೂ ದಾರಿಯವರೆಗೆ ನಡೆಯಲಾರದು."

"ಅಹುದು.ನನ್ನ ಮೂರ್ಖತನ!" ರಕ್ ಸ್ಯಾಕನ್ನು ಕೆಳಗಿಡುತ್ತ ಅದರಲ್ಲಿ ಒಂದು ಸಾಧನವನ್ನು ಹೊರತೆಗೆದನು.

ಪದ್ಮಾನಿಗೆ ಏನೋ ಒಂದು ವಸ್ತು ಕಾಣುತ್ತಿತ್ತು.

"ಏನಿದು?"

ಒಂದು ಕ್ಷಣದಲ್ಲಿ ಬುಂಬೂವಿನ ಕಣ್ಣುಗಳ ಮೇಲೆ ಸ್ಟ್ರಾಂಯ್ಖಿನ ಆ ಸಾಧನವನ್ನು ಸಿಗಿಸಿದನು. ಪ್ರಕಾಶದ   ಕಿರಣಗಳು ದಾರಿಗುಂಟ ಬೆಳಕನ್ನು ಚೆಲ್ಲುತ್ತಿದ್ದವು.

"ಪದ್ಮಾ, ಇದು ಹೆಡ್ ಟಾರ್ಚು. ಹೆಡ್ ಟಾರ್ಚು."

ಬುಂಬೂನಿಗೆ ಮುನ್ನಡೆಯಲು ಟುಕ್ ಟುಕ್ ಎಂದು ದನಿ ಮಾಡತೊಡಗಿದನು.

ಬುಂಬೂನಿಗೆ ಒಂದು ಕ್ಷಣ ಏನೂ ತಿಳಿಯಲಿಲ್ಲ. ತನ್ನ ಕತ್ತನ್ನು ಮೇಲೆ ಎತ್ತಿ ಒಂದೊಂದು ಹೆಜ್ಜೆ ಹಾಕುತ್ತ ಮುಂದೆ ಸರಿಯತೊಡಗಿತು. ಮುಂದೆ ಮುಂದೆ ಹೋಗತೊಡಗಿತು.

"ಓಹ ದೇವರೆ! ಬುಂಬೂ ನಡೆಯುತ್ತಲಿದೆ... ನಡೆಯುತ್ತಲಿದೆ...." ಅಚ್ಚರಿಯಿಂದ ಪದ್ಮಾ ಕೂಗತೊಡಗಿದಳು. "ಎಲ್ಲರು ಬನ್ನಿ. ಬುಂಬೂನನ್ನು ನೋಡಿ." ಎಂದು ಒದರಿದಳು.

ಆಬಾ-ಲೇ ಮತ್ತು ಆಮಾ-ಲೇ ಮನೆಯಿಂದ ಹೊರ ಬಂದು ಈ ಮಾಟವನ್ನು ನೋಡತೊಡಗಿದರು. ಅವರು ಕತ್ತೆಯು ಕತ್ತಲಲ್ಲಿ ಮುಂದೆ ಮುಂದೆ ಹೋಗುವ ದೃಶ್ಯವನ್ನು ನೋಡುತ್ತಿದ್ದರು.



ಈಗ ಜೂನ ತಿಂಗಳು. ಟ್ರೆಕಿಂಗ ಸೀಜನ್ನು ರಭಸದಿಂದ ನಡೆಯುತ್ತಲಿದೆ. ಆಬಾ-ಲೇ ಟ್ರೆಕರ್ಸ ಗುಂಪುಗಳ ನೇತೃತ್ವ ಮಾಡುತ್ತಿದ್ದಾರೆ. ಕ್ಯಾಂಪ ಸೈಟಿನ ಹತ್ತಿರ ಕತ್ತಲೆಯಾದಾಗ ಆಬಾ-ಲೇ ಗರ್ವದಿಂದ ಹೆಡ್ ಟಾರ್ಚನ್ನು ಬುಂಬೂವಿನ ತಲೆಗೆ ಕಟ್ಟುತ್ತಾರೆ. ಬುಂಬೂವಿನ ಮುಖದ ಎದುರಿಗಿನ ಪ್ರಕಾಶವನ್ನು ನೋಡಿದಾಗ ಟ್ರೆಕ್ಕರ್ಸರಿಗೂ ಕೂಡ ಆಶ್ಚರ್ಯವಾಗುತ್ತಿತ್ತು. ತಮ್ಮ ಕ್ಯಾಮೆರಾದಿಂದ ಇದರ ಫೋಟೋ ತೆಗೆದುಕೊಳ್ಳಲು ಎಲ್ಲರು ಹವಣಿಸುತ್ತಿದ್ದರು.

ಮನೆಯಲ್ಲಿ ಪದ್ಮಾ ಟ್ರೆಕರ್ಸ ಕಳಿಸಿಕೊಟ್ಟ ಫೋಟೋಗಳ ಆಲ್ಬಮನ್ನು ನೋಡುತ್ತ ಸಂತಸ ಪಡುತ್ತಿದ್ದಳು. ಬುಂಬೂನ ತಲೆ ಮೇಲಿನ ಹೆಡ್ ಟಾರ್ಚನ್ನು ನೋಡಿದಾಗ ಅವಳಿಗೆ ನಗೆ ಬರುತ್ತಿತ್ತು. ಬುಂಬೂ ತನ್ನ ಕುಟುಂಬದ ಸದಸ್ಯನಾಗಿರುವ ಅಭಿಮಾನದಿಂದಾಗಿ ಅವಳು ಆನಂದಿತಳಾಗುತ್ತಿದ್ದಳು.

For my dear Aba-ley and Ama-ley,
for allowing me to chart my own path

- Sujatha Padmanabhan

For Amma and Appa, with love.

- Madhuvanti Anantharajan

ಬುಂಬೂ.. **ಕದಲದೆ ಇದ್ದ ಕತ್ತೆ**

Bumboo.. **kadalade idd katte**

Story: Sujatha Padmanabhan

Illustrations: Madhuvanti Anantharajan

Kannada Translation: Prabhakar Nanawaty

Creative Commons for text: Sujatha Padmanabhan, June 2015
The license only allows readers to use the text in this book and share them with others for free distribution under a similar Creative Commons license as long as they credit the author and publisher. The text cannot be changed in any way or used commercially. For any kind of permission for commercial use, the author may be contacted through publisher.

Creative Commons for illustrations: Madhuvanti Anantharajan, June 2015
This license allows reader to copy, remix, tweak, and build upon the illustrations in this book non-commercially, giving credit for the original to the illustrator and stating clearly that the original illustrator is not liable for and does not in any way endorse copied or modified versions or their use. The new creations must be also be licensed under identical terms. For any kind of permission for commercial use, the illustrator may be contacted through publisher.

May 2018 / 1000 copies
March 2024 / 2000 copies
Paper: 100 gsm Maplitho and 220 gsm Paper board (Cover)
This Kannada translation is supported by the Parag Initiative of Tata Trusts.
ISBN: 978-93-85236-62-4
Price: ₹ 150.00

Published by:
EKLAVYA FOUNDATION
Jamnalal Bajaj Parisar
Near Fortune Kasturi, Jatkhedi,
Bhopal - 462 026 (MP)
Phone: +91 755 - 297 7770, 71, 72
www.eklavya.in / books@eklavya.in

Printed at: R.K. Secuprint Pvt. Ltd., Bhopal, Phone +91 755 268 7589

ಈ ಕತೆಯಲ್ಲಿಯ ಲಡಾಖಿ ಶಬ್ದಗಳುಃ

ಆಬಾ-ಲೇಃ ತಂದೆಯನ್ನು ಕರೆಯುವ ಶಬ್ದ

ಆಮಾ-ಲೇಃ ತಾಯಿಯನ್ನು ಕರೆಯುವ ಶಬ್ದ

ಆಮ್ಚಿಃ ಲಡಾಖಿ-ಟಿಬೆಟದಲ್ಲಿಯ ಬೇರು-ಎಲೆಗಳಿಂದ ಮಾಡಿದ ಮದ್ದನ್ನು ಕೊಡುವ ವೈದ್ಯ

ಥುಕ್ಪಾಃ ಹಿಮಾಲಯದಲ್ಲಿಯ ನೂಡಲ್ ದಿಂದ ಮಾಡಿದ ಕಷಾಯ

ಛಾಂಗಃ ಬಾರ್ಲಿಯಿಂದ ಮಾಡಿದ ಅಲ್ಕೋಹಾಲಿಕ್ ಪೇಯ

ಜುಲ್ಲೆಃ ಭೆಟ್ಟಿಯಾದಾಗ ಒಂದಿಸುವ ಶಬ್ದ.

ಸುಜಾತಾ ಪದ್ಮನಾಭನ್

ಸುಜಾತಾಳಿಗೆ ಬೆಟ್ಟ-ಕೊಳ್ಳಗಳಲ್ಲಿ, ದಟ್ಟವಾದ ಅರಣ್ಯಗಳಲ್ಲಿ, ಚಿಟ್ಟೆಗಳನ್ನು, ಕ್ರಿಮಿ ಕೀಟಗಳನ್ನು ಮತ್ತು ಹರಿಯುವ ನದಿಗಳ ಧ್ವನಿಯನ್ನು ಕೇಳುವದರಲ್ಲಿ ಬಹು ಇಷ್ಟ. ಅವಳು ಪುಣೆಯಲ್ಲಿ ಇರುತ್ತಾಳೆ. ಹಾಗು ಪರಿಸರದ ಶಿಕ್ಷಣದಲ್ಲಿ ಆಸಕ್ತಿ ವಹಿಸುತ್ತಾಳೆ. ಮಕ್ಕಳಿಗಾಗಿ ಸಾಕಷ್ಟು ಪುಸ್ತಕಗಳನ್ನು ಅವಳು ಬರೆದಿದ್ದಾಳೆ. ಮಕ್ಕಳಿಗೆ ಪರಿಸರ ಶಿಕ್ಷಣ ಕೊಡಲು ಪುಸ್ತಕ, ಆಟಿಗೆ, ಮುಂತಾದವುಗಳಲ್ಲಿ ಅವಳು ಭಾಗವಹಿಸುತ್ತಾಳೆ. ಅವಳು ಕಲ್ಪವೃಕ್ಷ ಎಂಬ ಪರಿಸರವಾದಿಗಳ ಸಂಘಟನೆಯ ಸದಸ್ಯಳು.

ಮಧುವಂತಿ ಅನಂತರಾಜನ್

ಮಧುಳಿಗೆ ಓದುವದರಲ್ಲಿ ಹಾಗು ಚಿತ್ರ ತೆಗೆಯುವದರಲ್ಲಿ ಆಸಕ್ತಿ. ಬೆಟ್ಟ ಕೊಳ್ಳಗಳಲ್ಲಿ ತಿರುಗಾಡುವದು ಇಷ್ಟ. ಈ ಪುಸ್ತಕದಿಂದಾಗಿ ಮೂರು ಸಂಗತಿಗಳು ಕೂಡಿ ಬಂದಿವೆ. ಶಿಕ್ಷಣ ವಿಷಯದಲ್ಲಿ PhD ಮಾಡುವ ಗುಡ್ಡವನ್ನು ಅವಳಿಗೆ ಹತ್ತಬೇಕಾಗಿದೆ. ಮುಂದೆ ಏನಿದೆಯೋ ಅದು ಅವಳಿಗೂ ಗೊತ್ತಿಲ್ಲ.



ಬುಂಬೂ ಇದು ಒಂದು ಲಡಾಖದಲ್ಲಿಯ
ಮುದ್ದಾದ ಕತ್ತೆಯ ಹೆಸರು. ಚಿಕ್ಕಪದ್ಮಾಳಿಗೆ
ಅದರ ಮೇಲೆ ಪ್ರೀತಿ.
ಅದು ಬೆಳೆಯುತ್ತಿದ್ದಂತೆ ಟ್ರೆಕಿಂಗದ ಮೇಲೆ
ಉಪಜೀವನ ನಡೆಸುವ ಈ ಕುಟುಂಬಕ್ಕೆ ಏನು
ಕಂಡು ಬರುತ್ತದೆ? ರಾತ್ರಿಯ ಸಮಯದಲ್ಲಿ ಅದು
ಇಷ್ಟೊಂದು ವಿಚಿತ್ರವಾಗಿ ಏಕೆ ವರ್ತಿಸುತ್ತದೆ?
ಅದಕ್ಕೆ ನಡೆಯಲು ಏಕೆ ಆಗುವದಿಲ್ಲ? ಪದ್ಮಾನ
ತಂದೆ ಅದನ್ನು ಮಾರುವ ವಿಚಾರ ಏಕೆ
ಮಾಡುತ್ತಾರೆ?

ಲಡಾಖದ ಒಂದು ಚಿಕ್ಕ ಹುಡುಗಿ ಮತ್ತು ಅವಳ
ಒಬ್ಬ ಗೆಳೆಯ ಬುಂಬೂವಿನ ವಿಚಿತ್ರವಾದ
ಬೇನೆಯ ಮೇಲೆ ಯಾವ ಉಪಚಾರ
ಮಾಡುತ್ತಾರೆ ಎಂಬುದನ್ನು ಈ ಪುಸ್ತಕದಲ್ಲಿ
ವಿವರಿಸಲಾಗಿದೆ.

ಏಕಲವ್ಯ ಪ್ರಕಾಶನ

parag
AN INITIATIVE OF
TATA TRUSTS

Price: ₹ 150.00

9789385236624